19.12.27 64-0-154

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ. ಬಲ್ಕೀಸ್ ಬಾನು ಇವರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು ಮಾಹಿತಿ ನೀಡುವ ಬಗ್ಗೆ

### ಶೂನ್ಯ ವೇಳೆ ಪ್ರಸ್ತಾಪ

ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಿಂದ ರೈತರಿಗೆ ಸರ್ಕಾರದ ಶೂನ್ಯ ಬಡ್ಡಿದರ ಯೋಜನೆಯಡಿಯಲ್ಲಿ ಗರಿಷ್ಟ 05 ಲಕ್ಷ ಮಿತಿಗೊಳಪಟ್ಟು ಅಲ್ಪಾವಧಿ ಕೃಷಿ ಸಾಲವನ್ನು ನೀಡಲಾಗುತ್ತಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಕೃಷಿ ಚಟವಟಿಕೆಗೆ ಅಗತ್ಯ ವಿರುವ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳು ಹಾಗೂ ಇತರೆ ಪರಿಕರಗಳ ವೆಚ್ಚಗಳು ಅಧಿಕವಾಗಿದ್ದು, ರೈತ ಸಾಲ ಬೇಡಿಕೆಯು ಹೆಚ್ಚಾಗಿರುತ್ತದೆ. ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಿಕೆಯ ಪ್ರಮಾಣವನ್ನು ರೂ.3.00 ಲಕ್ಷಗಳಿಂದ ರೂ.5.00 ಲಕ್ಷಗಳಿಗೆ ಹೆಚ್ಚಿಸಿರುತ್ತದೆ.

ನಬಾರ್ಡ್ ಸಂಸ್ಥೆಯು ರೈತರಿಗೆ ನೀಡಲಾಗುವ ಅಲ್ಪಾವಧಿ ಕೃಷಿ ಸಾಲದ ಮೇಲೆ ರಿಯಾಯತಿ ಬಡ್ಡಿದರದಲ್ಲಿ ಪುನರ್ಧನ ಸೌಲಭ್ಯವನ್ನು ಒದಗಿಸುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ಪುನರ್ಧನ ಸೌಲಭ್ಯದ ಮಿತಿಯನ್ನು ಗಣನೀಯವಾಗಿ ಇಳಿಕೆ ಮಾಡುತ್ತಿದ್ದು, ಕಳೆದ 05 ವರ್ಷದಲ್ಲಿ ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿಗೆ ನಬಾರ್ಡ್ ಮಂಜೂರು ಮಾಡಿರುವ ಅಲ್ಪಾವಧಿ ಕೃಷಿ ಸಾಲದ ಮಿತಿಯು ಕೋರಿಕೆ ಗಿಂತ ಕಡಿಮೆ ಮಂಜೂರು ಮಾಡಲಾಗಿದೆ. ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಶಿವಮೊಗ್ಗ ಸನ್ 2023-24 ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟು 10,4250, ರೈತರುಗಳಿಗೆ ರೂ.1010.25 ಕೋಟಿ ಮೊತ್ತದ ಅಲ್ಪಾವಧಿ ಕೃಷಿ ಸಾಲವನ್ನು ನೀಡಿದ್ದು, ಸನ್ 2024-25 ನೇ ಸಾಲಿಗೆ 1,20,000 ರೈತರಿಂದ ರೂ.1200 ಕೋಟಿಗಳ ಸಾಲವನ್ನು ನೀಡಲು ಗುರಿ ಹೊಂದಲಾಗಿದೆ. ಜಿಲ್ಲೆಯಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯರುಗಳ ಸಾಲದ ಬೇಡಿಕೆ ರೂ 2650 ಕೋಟಿ ಗಳಷ್ಟು ಪ್ರಸ್ತುತ ರೂ.1200 ಕೋಟಿಗಳಷ್ಟು ಮಾತ್ರ ಸಾಲ ನೀಡಲು ಸಾಧ್ಯವಾಗಿದ್ದು, ಬೇಡಿಕೆಯ ಕನಿಷ್ಠ ಅರ್ಧದಷ್ಟನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಹೊಸ ರೈತರಿಗೆ ಸಾಲ ನೀಡಲು ಸಾಧ್ಯವಾಗದೇ ರೈತಾಪಿ ವರ್ಗವನ್ನು ಉತ್ಪಾದನಾ ವಲಯಕ್ಕೆ ಆರ್ಥಿಕ ಸೇರ್ಪಡೆಗೊಳಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಯ ಅನುಷ್ಠಾನಕ್ಕೆ ಹಿನ್ನಡೆ ಉಂಟಾಗುತ್ತದೆ.

ನಬಾರ್ಡ್ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಕಡಿಮೆ ಬಡ್ಡಿದರದಲ್ಲಿ ಪುನರ್ಧನ ಸಾಲ ಸೌಲಭ್ಯ ಮಂಜೂರು ಮಾಡದಿದ್ದಲ್ಲಿ ಅಪೆಕ್ಸ್ ಬ್ಯಾಂಕಿನ ಸ್ವಂತ ಬಂಡವಾಳದ ಶೇ. 8.15 ರ ಬಡ್ಡಿದಲ್ಲಿ ಹಾಗೂ ನಬಾರ್ಡ್‌ನ ಎಸ್.ಟಿ.ಎಸ್.ಎ.ಓ ಹೆಚ್ಚುವರಿ ಶೇ.8 ರ ಬಡ್ಡಿದರದಲ್ಲಿ ಸಾಲ ಪಡೆದು ರೈತರಿಗೆ ಸಾಲ ವಿತರಣೆ ಮಾಡಬೇಕಾಗುವುದು ಅನಿವಾರ್ಯವಾಗುತ್ತದೆ. ಸದರಿ ಅಧಿಕ ಬಡ್ಡಿದರದ ಸಾಲದಿಂದ ಶೇ.1.20 ರಷ್ಟು ಬಡ್ಡಿ ನಷ್ಟವಾಗುತ್ತದೆ.

ರಾಜ್ಯ ಸರ್ಕಾರವು 2023-24 ನೇ ಸಾಲಿನ ಬಡ್ಡಿದರವನ್ನು ಇನ್ನೂ ನಿಗದಿಪಡಿಸದೇ ಇರುವುದರಿಂದ ಸದರಿ ವರ್ಷದ ಬಡ್ಡಿ ಕ್ಲೇಂ ಬಿಲ್ ಗಳನ್ನು ಸರ್ಕಾರಕ್ಕೆ ಇನ್ನೂ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ. ರಾಜ್ಯ ಸರ್ಕಾರದ ಬಡ್ಡಿ ದರ ನಿಗದಿಪಡಿಸುವಲ್ಲಿ ವಿಳಂಬವಾಗುತ್ತಿದ್ದು, ಆಯಾ ವರ್ಷದ ಪ್ರಾರಂಭದಲ್ಲಿ ಬಡ್ಡಿ ದರ ನಿಗದಿಯಾದಲ್ಲಿ ಬ್ಯಾಂಕಿಗೆ ಬರಬೇಕಾದ ಬಡ್ಡಿ ಕ್ಲೇಂ ಬಿಲ್ ಗಳು

ಸರ್ಕಾರಕ್ಕೆ ಸಕಾಲದಲ್ಲಿ ಸಲ್ಲಿಕೆಯಾದಲ್ಲಿ ಸಂಪನ್ಮೂಲ ಕೊರತೆ ಉಂಟಾಗುವುದಿಲ್ಲ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಬಡ್ಡಿ ಕ್ಲೇಂ ಬಿಲ್ ಗಳ ಮೊತ್ತ ಸಕಾಲದಲ್ಲಿ ಬಾರದೇ ಇರುವುದರಿಂದ ಜಿಲ್ಲಾ ಬ್ಯಾಂಕುಗಳಿಗೆ ಸಂಪನ್ಮೂಲದ ಕೊರತೆ ಉಂಟಾಗುತ್ತಿದ್ದು, ಸಾಲ ಹಂಚಿಕೆಯ ಪ್ರಮಾನ ಕುಂಠಿತವಾಗುತ್ತಿದೆ.

ಆದ್ದರಿಂದ ರಾಜ್ಯದ ರೈತರ ಹಿತದೃಷ್ಟಿಯನ್ನು ಗಣನೆಗೆ ತೆಗೆದುಕೊಂಡು ನಬಾರ್ಡ್ ಪುನರ್ಧನ ಸೌಲಭ್ಯವನ್ನು ಹೆಚ್ಚಿಸುವಂತೆ ನಬಾರ್ಡ ಸಂಸ್ಥೆಗೆ ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ರಾಜ್ಯ ಸರ್ಕಾರವು ಬಡ್ಡಿ ದರವನ್ನು ಆಯಾ ಆರ್ಥಿಕ ವರ್ಷದ ಪ್ರಾರಂಭದಲ್ಲಿ ನಿಗದಿಪಡಿಸುವ ಬಗ್ಗೆ ಮತ್ತು ಬಡ್ಡಿ ಬಿಲ್‌ಗಳ ಮೊತ್ತವನ್ನು ಶೀಘ್ರವಾಗಿ ಬಿಡುಗಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:**

ಕರ್ನಾಟಕ ರಾಜ್ಯದಲ್ಲಿ ಅಲ್ಪಾವಧಿ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಶೂನ್ಯ ಬಡ್ಡಿದರದಲ್ಲಿ ಗರಿಷ್ಠ 5.00 ಲಕ್ಷದವರೆಗಿನ ಅಲ್ಪಾವಧಿ ಸಾಲವನ್ನು ಸನ್ 2023-24 ನೇ ಸಾಲಿನಿಂದ ಒದಗಿಸಲಾಗುತ್ತಿದೆ. ನಬಾರ್ಡ್ ಸಂಸ್ಥೆಯು ಕರ್ನಾಟಕ ರಾಜ್ಯ ಸರ್ಕಾರ ಅಪೆಕ್ಸ್ ಬ್ಯಾಂಕಿನ ಮೂಲಕ ರಿಯಾಯತಿ ಬಡ್ಡಿದರದಲ್ಲಿ ಪುನರ್ಧನ ಸೌಲಭ್ಯ ಒದಗಿಸುತ್ತಿದೆ.

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ 2024-25ನೇ ಸಾಲಿಗೆ ರೂ.9162 ಕೋಟಿಗಳ ರಿಯಾಯಿತಿ ಬಡ್ಡಿದರದ ಅಲ್ಪಾವಧಿ ಕೃಷಿ ಸಾಲದ ಮಿತಿಯನ್ನು ಮಂಜೂರು ಮಾಡಲು ನಬಾರ್ಡ್‌ನ್ನು ಕೋರಿರುತ್ತಾರೆ. ಆದರೆ ದಿನಾಂಕ: 24.09.2024ರ ನಬಾರ್ಡ್ ಪತ್ರದಲ್ಲಿ ಕರ್ನಾಟಕ ರಾಜ್ಯಕ್ಕೆ ರೂ.2340 ಕೋಟಿಗಳ ಮಿತಿಯನ್ನು ಮಂಜೂರು ಮಾಡಿರುತ್ತದೆ. ಕಳೆದ ಐದು ವರ್ಷಗಳಲ್ಲಿ ನಬಾರ್ಡ್ ಕರ್ನಾಟಕ ರಾಜ್ಯಕ್ಕೆ ಅಲ್ಪಾವಧಿ ಕೃಷಿ ಸಾಲ ಮಂಜೂರು ಮಾಡಿದ ಮಿತಿಯು ಈ ಕೆಳಗಿನಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ ಸಂ. | ಹಣಕಾಸು ವರ್ಷ | ಮಿತಿ ಮಂಜೂರಾತಿ ದಿನಾಂಕ | ಮಂಜೂರಾದ ಮೊತ್ತ | ಇಳಿಕೆ/ಏರಿಕೆ ಮೊತ್ತ | ಶೇಖಡವಾರು ಇಳಿಕೆ/ಏರಿಕೆ |
|---|---|---|---|---|---|
| 1 | 2019-20 | 06.07.2019 | 4200.00 | 700.00 | +15.00% |
| 2 | 2020-21 | 10.09.2020 | 5500.00 | 1300.00 | +27.00% |
| 3 | 2021-22 | 22.09.2021 | . 5483.00 | 16.10 | -1.00% |
| 4 | 2022-23 | 16.09.2022 | 5550.00 | 66.10 | +1.00% |
| 5 | 2023-24 | 17.11.2023 | 5600.00 | 55.00 | +1.00% |
| 6 | 2024-25 | 24.09.2024 | 2340.00 | 3260.00 | -58.00% |

ಮೇಲ್ಕಂಡ ವಿವರಗಳನ್ನು ಗಮನಿಸಿದಾಗ 2023-24ನೇ ಸಾಲಿಗೆ ರೂ.5600 ಕೋಟಿ ಅಲ್ಪಾವಧಿ ಕೃಷಿ ಸಾಲದ ಮಿತಿ ಮಂಜೂರು ಮಾಡಲಾಗಿರುತ್ತದೆ. 2024-25ನೇ ಸಾಲಿಗೆ ರೂ.2340

ಕೋಟಿ ಮಾತ್ರ ಮಂಜೂರು ಮಾಡಿದ್ದು, ಕಳೆದ ಸಾಲಿಗೆ ಹೋಲಿಸಿದರೆ ಇದು ರೂ.3260 ಕೋಟಿ [ಶೇ.. 58%] ರಷ್ಟು ಕಡಿಮೆಯಾಗಿರುತ್ತದೆ.

2024-25ನೇ ಸಾಲಿಗೆ ಸಹಕಾರ ಸಂಸ್ಥೆಗಳ ಮೂಲಕ ರಾಜ್ಯದಲ್ಲಿ 35.00 ಲಕ್ಷ ರೈತರಿಗೆ ರೂ.25,000 ಕೋಟಿ ಅಲ್ಪಾವಧಿ ಕೃಷಿ ಸಾಲ ವಿತರಿಸುವ ಗುರಿ ಹೊಂದಿದ್ದು, ನಬಾರ್ಡ್ ರಿಯಾಯಿತಿ ಬಡ್ಡಿದರ ಕೃಷಿ ಸಾಲದ ಮಿತಿಯನ್ನು ರೂ.2,340/- ಕೋಟಿಗೆ ಕಡಿಮೆ ಮಾಡಿರುವುದರಿಂದ ರಾಜ್ಯದಲ್ಲಿ ಕೃಷಿ ಸಾಲ ವಿತರಣೆಗೆ ನಿಗಧಿಪಡಿಸಿದ ಗುರಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ.

ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಶಿವಮೊಗ್ಗ ಸನ್ 2023-24 ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟು 10,4250, ರೈತರುಗಳಿಗೆ ರೂ.1010.25 ಕೋಟಿ ಮೊತ್ತದ ಅಲ್ಪಾವಧಿ ಕೃಷಿ ಸಾಲವನ್ನು ನೀಡಿದ್ದು, ಸನ್ 2024-25 ನೇ ಸಾಲಿಗೆ 1,20,000 ರೈತರಿಂದ ರೂ.1200 ಕೋಟಿಗಳ ಸಾಲವನ್ನು ನೀಡಲು ಗುರಿ ಹೊಂದಲಾಗಿದೆ. ಈ ಗುರಿಗೆ ಅನುಗುಣವಾಗಿ ಇಲ್ಲಿಯವರೆಗೆ ರೂ.570 ಕೋಟಿ ಮಾತ್ರ ಅಲ್ಪಾವಧಿ ಕೃಷಿ ಸಾಲ ವಿತರಿಸಲಾಗಿದೆ. ನಬಾರ್ಡ್ ರಿಯಾಯತಿ ಬಡ್ಡಿದರದ ಅಲ್ಪಾವಧಿ ಕೃಷಿ ಸಾಲದ ಮಿತಿಯನ್ನು ಕಡಿಮೆ ಮಾಡಿರುವುದರಿಂದ ಜಿಲ್ಲಾ ಬ್ಯಾಂಕುಗಳು ನಬಾರ್ಡ್‌ನಿಂದ ಅಧಿಕ ಬಡ್ಡಿ ದರ ಅಂದರೆ ಶೇ.8.20 ರಲ್ಲಿ ಸಾಲ ಪಡೆಯಬೇಕಾಗಿರುತ್ತದೆ. ಇದರಿಂದಾಗಿ ಬ್ಯಾಂಕುಗಳಿಗೆ ಆರ್ಥಿಕ ಹೊರೆಯಾಗುತ್ತದೆ.

ರಾಜ್ಯ ಸರ್ಕಾರ 2023-24 ನೇ ಸಾಲಿಗೆ ಅಲ್ಪಾವಧಿ ಕೃಷಿ ಸಾಲಕ್ಕೆ ಶೇ.6 ರ ಬಡ್ಡಿದರ ನಿಗದಿಪಡಿಸಿ ದಿನಾಂಕ:19/11/2024 ರಂದು ಆದೇಶ ಹೊರಡಿಸಿರುತ್ತದೆ.

ನಬಾರ್ಡ್ ನಿಂದ ಕರ್ನಾಟಕ ರಾಜ್ಯಕ್ಕೆ ಮಂಜೂರಾದ ರಿಯಾಯತಿ ಬಡ್ಡಿ ದರದ ಅಲ್ಪಾವಧಿ ಸಾಲದ ಮಿತಿಯನ್ನು ಹೆಚ್ಚಿಸಲು ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಯವರು ದಿ:14/11/2024 ರಲ್ಲಿ ಕೇಂದ್ರ ಸರ್ಕಾರದ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಹಾಗೂ ಹಣಕಾಸು ಸಚಿವರಿಗೆ ಪತ್ರ ಬರೆದು ಮತ್ತು ಅವರನ್ನು ಖುದ್ದಾಗಿ ಭೇಟಿ ನೀಡಿ ಮಿತಿಯನ್ನು ಹೆಚ್ಚಿಸಲು ಕೋರಿರುತ್ತಾರೆ. ಈ ಬಗ್ಗೆ ಕೇಂದ್ರ ಸರ್ಕಾರದಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರಿಗೆ ಹಾಗೂ ರಾಜ್ಯದ ಎಲ್ಲಾ ಲೋಕಸಭಾ ಮತ್ತು ರಾಜ್ಯ ಸಭಾ ಸದಸ್ಯರಿಗೆ ಪತ್ರ ಬರೆದು ನಬಾರ್ಡ್ ರಿಯಾಯತಿ ಬಡ್ಡಿದರದಲ್ಲಿ ನೀಡುವ ಸಾಲದ ಮಿತಿಯನ್ನು ಹೆಚ್ಚಿಸಲು ಸೂಕ್ತ ಕ್ರಮ ಕೈಗೊಳ್ಳಲು ಕೋರಲಾಗಿದೆ.

ಸಂಖ್ಯೆ ಸಿಒ 336 ಸಿಎಲ್ ಎಸ್ 2024

K. N. Rajanna

[ಕೆ.ಎನ್.ರಾಜಣ್ಣ]
ಸಹಕಾರ ಸಚಿವರು